ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ.850/2014

| | | |
|---|---|---|
| ಸಾಕ್ಷಿದಾರರು ಹೆಸರು | : ಕೆಂಪರಾಜು | ದಿನಾಂಕಃ 25.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ರಂಗಯ್ಯ | |
| ವಯಸ್ಸು | : 51 ವರ್ಷ | |
| ಉದ್ಯೋಗ | : ವ್ಯವಸಾಯ | **CW-6** |
| ವಾಸಸ್ಥಳ | : ಹೆಗ್ಗವಾಡಿ ಗ್ರಾಮ | **PW-3** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಸಾಕ್ಷಿಗೆ ನಿಪಿಃ1 ರ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರ್ತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿಃ1(ಸಿ) ಎಂದೂ ಗುರುತಿಸಲಾಯಿತು. ನಿಪಿಃ1 ಕ್ಕೆ ಸುಮಾರು 5-6 ವರ್ಷಗಳ ಹಿಂದೆ ನಮ್ಮೂರಿನಲ್ಲಿ ಸಹಿ ಮಾಡಿರುತ್ತೇನೆ. ನಿಪಿಃ1 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಹಿ ಮಾಡಿದ ಕಾಲಕ್ಕೆ ನಾನು ಯಾವುದೇ ವಾಹನಗಳನ್ನು ನೋಡಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ದಿನಾಂಕಃ 09.02.2014 ರಂದು ಚಾಮರಾಜನಗರ-ನಂಜನಗೂಡು ಮುಖ್ಯ ರಸ್ತೆಯ ಕಾಡಳ್ಳಿ ಕಡೆಗೆ ಹೋಗು ರೈಲ್ವೆ ಕ್ರಾಸ್ ಬಳಿ ಆರೋಪಿಯು ಅಪಘಾತ ಮಾಡಿದ ಸಂಬಂಧ ನಿಪಿಃ1 ರಂತೆ ಮಹಜರ್ ಮಾಡಿ ನನ್ನ ಸಮಕ್ಷಮ ಕೆಎ 10 ಕ್ಯೂ 8444 ಬಜಾಜ್ ಪಲ್ಸರ್ ಬೈಕ್ ಮತ್ತು ಟಿಎನ್ 33 ಎನ್ 2840 ಟಿಎನ್ ಎಸ್ ಟಿ ಸಿ ಬಸ್ ನ್ನು ಅಮಾನತ್ತುಪಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ.850/2014

| | | |
|---|---|---|
| ಸಾಕ್ಷಿದಾರರು ಹೆಸರು | : ರುಕೇಶ | ದಿನಾಂಕಃ 25.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಮಂಜಯ್ಯ | |
| ವಯಸ್ಸು | : 45 ವರ್ಷ | |
| ಉದ್ಯೋಗ | : ಕೂಲಿಕೆಲಸ | **CW-5** |
| ವಾಸಸ್ಥಳ | : ಹೆಗ್ಗವಾಡಿ ಗ್ರಾಮ | **PW-2** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ಸಾಕ್ಷಿಗೆ ನಿಪಿಃ1 ರ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರ್ತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿಃ1(ಬಿ) ಎಂದೂ ಗುರುತಿಸಲಾಯಿತು. ನಿಪಿಃ1 ಕ್ಕೆ ಸುಮಾರು 5 ವರ್ಷಗಳ ಹಿಂದೆ ನಮ್ಮೂರಿನ ಸರ್ಕಲ್ ಬಳಿ ಸಹಿ ಮಾಡಿರುತ್ತೇನೆ. ನಿಪಿಃ1 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಹಿ ಮಾಡಿದ ಕಾಲಕ್ಕೆ ನಾನು ಯಾವುದೇ ವಾಹನಗಳನ್ನು ನೋಡಿಲ್ಲ.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ದಿನಾಂಕಃ 09.02.2014 ರಂದು ಚಾಮರಾಜನಗರ –ನಂಜನಗೂಡು ಮುಖ್ಯ ರಸ್ತೆಯ ಕಾಡಳ್ಳಿ ಕಡೆಗೆ ಹೋಗು ರೈಲ್ವೆ ಕ್ರಾಸ್ ಬಳಿ ಆರೋಪಿಯು ಅಪಘಾತ ಮಾಡಿದ ಸಂಬಂಧ ನಿಪಿಃ1 ರಂತೆ ಮಹಜರ್ ಮಾಡಿ ನನ್ನ ಸಮಕ್ಷಮ ಕೆಎ 10 ಕ್ಯೂ 8444 ಬಜಾಜ್ ಪಲ್ಸರ್ ಬೈಕ್ ಮತ್ತು ಟಿಎನ್ 33 ಎನ್ 2840 ಟಿಎನ್ ಎಸ್ ಟಿ ಸಿ ಬಸ್ ನ್ನು ಅಮಾನತ್ತುಪಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .
ಸಿಸಿ.850/2014

| | | |
|---|---|---|
| ಸಾಕ್ಷಿದಾರರು ಹೆಸರು | : ಮಹೇಶ | ದಿನಾಂಕಃ 25.10.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಗುರುಸಿದ್ದಯ್ಯ | |
| ವಯಸ್ಸು | : 37 ವರ್ಷ | |
| ಉದ್ಯೋಗ | : ವ್ಯವಸಾಯ | **CW-4** |
| ವಾಸಸ್ಥಳ | : ಮರಿಯಾಲ ಗ್ರಾಮ | **PW-1** |

ಮುಖ್ಯ ವಿಚಾರಣೆ : ಮಾನ್ಯ ಎಪಿಪಿರವರಿಂದಃ

ನನಗೆ ಆರೋಪಿ ಗೊತ್ತಿಲ್ಲ. ಮೃತ ಅಪ್ಪಾಜಿ ರವರು ನಮ್ಮ ಊರಿನವರು, ಅವರು ಈಗ ತೀರಿಕೊಂಡಿರುತ್ತಾರೆ, ಕಾರಣ ಗೊತ್ತಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರ್ತಿಸಿದ್ದು, ಅದನ್ನು ನಿಪಿಃ 1 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ1(ಎ) ಎಂದೂ ಗುರುತಿಸಲಾಯಿತು.

( ಮಾನ್ಯ ಎಪಿಪಿರವರ ಕೋರಿಕೆ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಎಪಿಪಿರವರಿಂದಃ

ದಿನಾಂಕಃ 08.02.2014 ರಂದು ಚಾಸಾ1 ರವರು ಕೆಎ 10 ಕ್ಯೂ 8444 ಮೋಟಾರ್ ಸೈಕಲ್ ನಲ್ಲಿ ಚಾಸಾ2 ರವರನ್ನು ಕರೆದುಕೊಂಡು ನಂಜನಗೂಡು–ಚಾಮರಾಜನಗರ ರಸ್ತೆಯಲ್ಲಿರುವ ಕಾಡಹಳ್ಳಿ ಗ್ರಾಮಕ್ಕೆ ಹೋಗುವ ರೈಲ್ವೆ ಕ್ರಾಸಿಂಗ್ ಬಳಿ ರಾತ್ರಿ 8.30 ರ ಸಮಯದಲ್ಲಿ ಹೋಗುತ್ತಿದ್ದಾಗ ಆರೋಪಿ ಟಿ ಎನ್ 33 ಎನ್ 2840 ರ ಬಸ್ಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಮರಾಜನಗರದ ಕಡೆಗೆ ಚಾಲನೆ ಮಾಡಿಕೊಂಡು ಬಂದು ಚಾಸಾ1 ರವರ ಮೋಟಾರ್ ಬೈಕಿಗೆ ಡಿಕ್ಕಿ ಮಾಡಿದ್ದು, ಅದರಿಂದ ಮೃತ ಅಪ್ಪಾಜಿಗೆ ತೀವ್ರ ಸ್ವರೂಪದ ಗಾಯವಾಗಿ ಚಿಕಿತ್ಸೆ ಫಲಕಾರಿಯಾಗದೇ ಆಸ್ಪತ್ರೆಯಲ್ಲಿ ರಾತ್ರಿ 11.15 ರ ಸಮಯದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ1 ಮತ್ತು 2 ರವರಿಗೂ ಈ ಅಪಘಾತದಿಂದ ಗಾಯಗಳಾಗಿವೆ ಎಂದರೆ ಸರಿಯಲ್ಲ. ಈ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ 09.02.2014 ರಂದು ಅಪಘಾತವಾದ ಸ್ಥಳ ದಲ್ಲಿ ನಿಪಿಃ1 ರಂತೆ ಮಹಜರ್ ಮಾಡಿ ನನ್ನ ಸಮಕ್ಷಮ ಮೇಲೆ ಹೇಳಿದ ಎರಡೂ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ದಿನಾಂಕಃ 09.02.2014 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿಃ2 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.